5

# ಯೇಸು ತನ್ನವರಾದ ಯೆಹೂದ್ಯರೊಂದಿಗೆ ಹೇಗೆ ಹೊಂದಿಕೊಂಡಿದ್ದನು?

ಪಂಡಿತರುಗಳು ಹಾಗೂ ನಾಸ್ತಿಕರು, ಯೇಸುವಿನ ಮಾತುಗಳು ಹಾಗೂ ಕ್ರಿಯೆಗಳ ಲ್ಲಿರುವ ವಾಸ್ತವಾಂಶವನ್ನು ಕಂಡು ಹಿಡಿಯಲು ಪ್ರಯತ್ನಿಸಿರುವರು. ಇತಿಹಾಸದಲ್ಲಿನ ಯೇಸುವಿನ ಹಾಗೂ ನಂಬಿಕೆಯ ಕ್ರಿಸ್ತನ (ಕ್ರಿಸ್ತನ ಕುರಿತಾದ ಕ್ರೈಸ್ತರ ನಂಬಿಕೆ) ನಡುವಿನ ವ್ಯತ್ಯಾಸವನ್ನು ಕಂಡು ಹಿಡಿಯುವಲ್ಲಿ, ಯೇಸುವಿನ ಯೆಹೂದ್ಯ ಹಿನ್ನೆಲೆಯ ಬೆಳವಣಿಗೆಯಿಂದ, ಯೇಸುವನ್ನು ಪ್ರತ್ಯೇಕ ಮಾಡಿದ್ದಾರೆ. ಉದಾಹರಣೆಗೆ "ಯೇಸುವಿನ ಸಮ್ಮೇಳನದ" ಗುಂಪಿನವರು, ಯೇಸುವಿನ ಯೆಹೂದ್ಯ ಹಿನ್ನೆಲೆಗಿಂತಲೂ, ಆತನ ಗ್ರೀಕ್ ಹಿನ್ನೆಲೆಯನ್ನು ಪರಿಗಣಿಸಬೇಕು ಎಂದಿರುವರು. ಈ ಆಲೋಚನೆಯು ತದ್ವಿರುದ್ಧವಾದದ್ದೆ, ಏಕೆಂದರೆ, ಯೇಸು ಯೆಹೂದ್ಯರ ಪಾಲಿಸ್ತೇನನ್ನು ತೊರೆದು ಬೇರೆಕಡೆಗೆ ಸಂಚರಿಸಿರಲಿಲ್ಲ.

ಯೆಹೂದ್ಯರ ಕಾಲದಲ್ಲಿದ್ದವರು, ಯೇಸು ಯೆಹೂದ್ಯರಲ್ಲಿ ಭಿನ್ನವಾಗಿದ್ದನು ಎಂದು ತಿಳಿಸಿದರೂ, ಯೇಸು ಮಾತ್ರ ಯೆಹೂದ್ಯರ ಹಿನ್ನಲೆಯ ಉಪದೇಶ ಹಾಗೂ ಆಚರಣೆಗಳಿಗೆ ಮಹತ್ವ ನೀಡಿದ್ದನು. ಸುವಾರ್ತೆಗಳಲ್ಲೂ ಯೇಸುವಿನ ಯೆಹೂದ್ಯ ಹಿನ್ನಲೆಯನ್ನು ಬಲವಾಗಿ ನೀಡಲಾಗಿದೆ. ಯೇಸು ತನ್ನ ಕಾಲದಲ್ಲಿ ಯೆಹೂದ್ಯ ಸಂಸ್ಕೃತಿಯನ್ನೇ ಆಚರಿಸುತ್ತಿದ್ದನು.

ಆದ್ದರಿಂದ, "ಯೇಸು ತನ್ನವರಾದ ಯೆಹೂದ್ಯರೊಂದಿಗೆ ಹೇಗೆ ಹೊಂದಿಕೊಂಡಿದನು?" ಎಂದು ಕೇಳಬೇಕು; ಯೇಸು ಯಾವ ವಿಧವಾದ ಹಾಗೂ ಎಲ್ಲಿಯವರೆಗೆ ಯೆಹೂದ್ಯ ಸಂಸ್ಕೃತಿಯನ್ನು ಅಭ್ಯಾಸಿಸಿದನು? ಆತನು ಅದರಿಂದ ಹೇಗೆ ಹೊರಬಂದನು? ಈ ಪ್ರಶ್ನೆಗಳಿಗೆ ಕೆಲವು ಉತ್ತರಗಳನ್ನು ಪಡೆಯದೆ ಹೋದರೆ, ಆತನ ಐತಿಹಾಸಿಕ ಚಿತ್ರಣವನ್ನು ಕಂಡುಹಿಡಿಯಲು ಸಾಧ್ಯವಿಲ್ಲ, ಆದರೆ ಸುವಾರ್ತೆಗಳು ಸಾಕಷ್ಟು ಮಾಹಿತಿಯನ್ನು ನೀಡುತ್ತವೆ, ಹಾಗೂ ಯೋಸೇಫಸನ, ಆಗಿನ ಕಾಲದ ಮೂಲಗಳು ಸಹ ಉತ್ತರ ನೀಡುತ್ತವೆ.

## I. ಯೇಸುವಿನ, ಯೆಹೂದ್ಯ ನಂಬಿಕೆ

ಯೆಹೂದ್ಯರ ನಂಬಿಕೆಯಲ್ಲಿ ಯೇಸು ಬಲವಾದ ನಂಬಿಕೆಯಿಟ್ಟಿದ್ದನು ಎಂಬುದಕ್ಕೆ ಯಾವ ಸೂಚನೆಗಳಿವೆ. ಸುವಾರ್ತೆಗಳನ್ನು ಓದುವಾಗ, ಇಬ್ರಿಯ ಬರವಣಿಗೆ ಕಾರ್ಯಗಳನ್ನು ಯೇಸು ಗಮನಿಸಿದನು ಎಂಬುದು ಪ್ರಶ್ನಾತೀತವಾಗಿದೆ ಆತನು ಹಳೇಒಡಂಬಡಿಕೆಯಲ್ಲಿನ ಉಪದೇಶಗಳ ಹಾಗೂ ವಿವಿಧ ವ್ಯಕ್ತಿತ್ವಗಳ ಹೇಳಿಕೆಗಳನ್ನು ನೀಡಿರುವನು, ಮತ್ತು ಅವುಗಳ ಸತ್ಯಾಂಶಗಳನ್ನು ಒಪ್ಪಿಕೊಂಡಿರುವನು (ಮತ್ತಾಯ 11:20-24; 12:1-8; ಮಾರ್ಕ 10:17-22; 12:24-27). ಇದರೊಂದಿಗೆ ಯೇಸು ಆ ವಾಕ್ಯಗಳಿಗೆ ಅತಿ ಗೌರವ ನೀಡಿದನು, ಏಕೆಂದರೆ ಆತನು ಅವುಗಳನ್ನು ಬಾಯಿಪಾಠಮಾಡಿ ಹೇಳಿದ್ದರಿಂದಲೇ ತಿಳಿಯುತ್ತೇವೆ. ಲೂಕ 4:1-13ರಲ್ಲಿ ಧರ್ಮೋಪದೇಶಕಾಂಡದಲ್ಲಿರುವ "ಇದು ಬರೆದದೆ ... ," ಎಂಬ ವಾಕ್ಯದಿಂದ ಸೈತಾನನಿಗೆ ಯೇಸು ಉತ್ತರ ನೀಡಿದನು. ಆತನು ಪ್ರವಾದನೆಗಳನ್ನು ನಾಶಮಾಡಲು ಬಾರದೆ, ಅವುಗಳನ್ನು ನೆರವೇರಿಸಲು ಬಂದೆನೆಂದು ಪರ್ವತದ ಮೇಲಿನ ಪ್ರಸಂಗದಲ್ಲಿ ತಿಳಿಸಿದನು. ಅದರಲ್ಲಿ ಬರೆದಿರುವದ್ದೆಲ್ಲವನ್ನು ನೆರವೇರಿಸಬೇಕು ಮತ್ತು ಆ ಕಟ್ಟಳೆಗಳಲ್ಲಿ ಒಂದನ್ನು ಮೀರಬಾರದೆಂದು ತಿಳಿಸಿದನು (ಮತ್ತಾಯ 5:17-19). ಲೂಕ 4:16 ರಲ್ಲಿ ನಜರೇತಿನ ಸಭಾಮಂದಿರಕ್ಕೆ ಆತನು

ತಪ್ಪದೆ ಹೋಗಿ, ಪ್ರವಾದನಾ ವಾಕ್ಯಗಳ ಘಠನೆ ಮಾಡುತ್ತಿದ್ದನು ಎಂದು ನಮೂದಿಸಲಾಗಿದೆ.

ಪುನಃ ಲೂಕ 4ರಲ್ಲಿ "ಆತನು ವಾಡಿಕೆಯ ಪ್ರಕಾರ ಸಬ್ಬತ್ ದಿನದಲ್ಲಿ ಸಭಾ ಮಂದಿರಕ್ಕೆ ಹೋದನು," ಆತನು ಮಂದಿರಕ್ಕೆ ಹೋಗುವದು ಸಂಪ್ರದಾಯವಾಗಿತ್ತು. ಮತ್ತಾಯ 17:24-27 ಆತನು ಸಂಪ್ರದಾಯ ಪ್ರಕಾರವಾಗಿ ಒಂದು ರೂಪಾಯಿ ಸುಂಕವನ್ನು ನೀಡಿದ್ದನು. ಪಸ್ಕ ಹಬ್ಬದ ಸಮಯದಲ್ಲಿ ಆತನು ಧರ್ಮಶಾಸ್ತ್ರದ ನಿಯಮದ ಪ್ರಕಾರ ತನ್ನ ಶಿಷ್ಯರೊಂದಿಗೆ ಪಸ್ಕವನ್ನು ಆಚರಿಸಿದನು. ಆತನು ನಿಯಮಗಳನ್ನೆಲ್ಲಾ ಒಪ್ಪಿಕೊಳ್ಳದೆ ಹೋದರೂ, ಯೆಹೂದ್ಯ ಸಂಪ್ರದಾಯಗಳನ್ನು ಮೀರಲಿಲ್ಲ ಎಂಬ ಸತ್ಯಾಂಶವು ಇದರಿಂದ ತಿಳಿದು ಬರುತ್ತದೆ (ಮತ್ತಾಯ 23:1-3).

ಯೇಸು ಭಾಲ್ಯಾರಭ್ಯ ಯಥಾರ್ಥವಾದ ಯೆಹೂದ್ಯನಾಗಿದ್ದರೂ, ತಾನು ಜೀವಿಸಿದ ಕಾಲದಲ್ಲಿದ್ದ ಯೆಹೂದ್ಯರೊಂದಿಗೆ ಯಾವ ರೀತಿ ವರ್ತಿಸಿದನು?

## II. ಯೆಹೂದ್ಯರ ಸಾಮಾನ್ಯವಾದ ಸಂಪ್ರದಾಯಗಳು

ಮೊದಲನೆಯ ಶತಮಾನದ ಯೆಹೂದ್ಯರ ಸಾಮಾನ್ಯ ಸಂಪ್ರದಾಯಗಳು, ಅವರನ್ನು ಇತರೆ ಗುಂಪಿನ ಜನರಿಂದ ವಿಂಗಡನೆ ಮಾಡಿದ್ದನು. ಅವುಗಳ ವೈಶಿಷ್ಟಗಳೇನು?

### ಒಬ್ಬನೇ ದೇವರಲ್ಲಿ ನಂಬಿಕೆ

ಅವರು ಒಬ್ಬನೇ ದೇವರಲ್ಲಿ ನಂಬಿಕೆ ಇಟ್ಟಿದ್ದರು. ಅವರುಗಳು ಇತರರಂತೆ ವಿಧವಿಧ ಸ್ಥಳಗಳನ್ನು ಹತೋಟಿಯಲ್ಲಿಡುವ ಹಾಗೂ ದ್ವಂದ ಇರುವ ದೇವತೆಗಳನ್ನು ನಂಬದೆ, ಅವರು ಜೀವವುಳ್ಳ ದೇವರನ್ನು ನಂಬಿದ್ದರು (ಒಂದೇ ನಂಬಿಕೆಯನ್ನು ಫರೋಹನನು ಸಹ ಆಚರಿಸಿದ್ದನು). "ಶೇಮ" ಎಂಬ ಪದದಲ್ಲಿ ಒಬ್ಬನೇ ದೇವರು ಎಂಬ ಅಂಶವನ್ನು ವಿವರಿಸಲಾಗಿದೆ: "ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು" (ಧರ್ಮೋಪದೇಶಕಾಂಡ 6:4, 5). "ನಿನ್ನ ದೇವರು ನಾನೇ. ನಾನಲ್ಲದೆ ನಿಮಗೆ ಬೇರೆ ದೇವರುಗಳು ಇರಬಾರದು" (ವಿಮೋಚನಕಾಂಡ 20:3; ಧರ್ಮೋಪದೇಶಕಾಂಡ 5:7).

ಯೆಹೂದ್ಯರ ಒಬ್ಬನೇ ದೇವರ ನಂಬಿಕೆಯು ಬಹು ಪ್ರಸಿದ್ಧವಾಗಿದ್ದರೂ, ಇತರ ಜನಾಂಗಗಳು ಏಕೆ ಅನೇಕ ದೇವತೆಗಳನ್ನು ನಂಬಿದ್ದರು. ಸಣ್ಣ ಸಣ್ಣ ಗುಂಪಿನ ಜನರನ್ನು ಒಗ್ಗೂಡಿಸುವ ಸಲುವಾಗಿ, ಅನೇಕ ದೇವತೆಗಳ ಪರಿಚಯವನ್ನು ಮಾಡಲಾಗಿತ್ತು. ಸಾಮಾನ್ಯವಾಗಿ ಯೆಹೂದ್ಯರು ಈ ಪದ್ಧತಿಗಳನ್ನು ನಿರಾಕರಿಸಿದ್ದರು ಆದರೂ ಕೆಲವು ಸಾರಿ ಅನ್ಯದೇವತೆಗಳನ್ನು ಪೂಜಿಸಿದ್ದರು (ಯೆರೆಮೀಯ 2:4-13; ಯೆಹೂದ್ಯರು 8:7-18; 1 ಅರಸು 18:1-46). ಅನ್ಯ ದೇವರುಗಳನ್ನು ಪೂಜಿಸಬಾರದು ಎಂಬ ಪ್ರವಾದಿಗಳ ಮಾತುಗಳಿಂದ, ಯೆಹೂದ್ಯರು ಒಬ್ಬನೇ ದೇವರನ್ನು ನಂಬಬೇಕಿತ್ತು ಎಂಬುದು ಸಾಭೀತಾಗಿದೆ.

### ಆಯ್ಕೆ

ಅಬ್ರಹಾಮನೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯ ಮೂಲಕ (ಆದಿಕಾಂಡ 12 ವಚನ 15), ಇಸ್ರಾಯೇಲ್ಯರು ದೇವರಿಂದ ಆಯ್ಕೆಗೊಂಡ ಒಂದೇ ಜನಾಂಗವೆಂದು, ಅವರ ಮೂಲಕ ಲೋಕಕ್ಕೆ ರಕ್ಷಣೆ ದೊರೆಯುವದೆಂದು ಸಾಭೀತಾಯಿತು. ಪ್ರಪಂಚದ ರಕ್ಷಣೆಯ ಇತಿಹಾಸವನ್ನು ದೇವರು ಅವರ ಮೂಲಕ ಆರಂಭಿಸಿದನು. ಈ ವಿಧವಾದ ಆಲೋಚನೆಯ ಕಾರಣದಿಂದ, ಜನರಲ್ಲಿ ಜನಾಂಗಿಯ ಬೇಧ ಉಂಟಾಯಿತು. ಅವರು ಬಾಬೇಲಿಗೆ ಸೆರೆ ಒಯ್ಯಲ್ಪಟ್ಟಾಗ ಈ ಸಂಗತಿಯು ಅಧಿಕವಾಯಿತು. ಉಳಿದ ಜನರು ತಮ್ಮ

ಉಳಿವಿಗಾಗಿ ಪ್ರಯಾಸಪಡಬೇಕಾಯಿತು, ಅದು ಕೇವಲ ದೈವ ಶಾಸ್ತ್ರದ ವಿಚಾರವಾಗಲಿಲ್ಲ.

ಅವರು ಸೆರೆಯಾಗಿ ಹೋದಾಗ ಈ ಸಂಗತಿಗಳ ಕ್ರಿಯೆಯ ಕುರಿತು ಎಜ್ರ, ಮತ್ತು ಸುವಾರ್ತೆಗಳಲ್ಲಿ ಬರೆಯಲಾಗಿದೆ. ಸಮಾರ್ಯದವರ ಹಿನ್ನೆಲೆಯ ಪರಿಚಯ ಹೆಚ್ಚು ಲಭ್ಯವಿಲ್ಲದಿದ್ದರು. ಸೆರೆಹೋದ ನಂತರ, ಪಾಲಿಸ್ತೇನಿನಲ್ಲಿ ವಾಸವಿರುವಾಗ ಯೆಹೂದ್ಯರಿಗೂ ಅನ್ಯರ ನಡುವೆ ಉಂಟಾದ ಸಂಬಂಧದಿಂದ ಈ ಜನಾಂಗವು ಉದ್ಭವಿಸಿರಬಹುದು. ಸೆರೆಹೋದ ಯೆಹೂದ್ಯರು ಹಿಂದಿರುಗಿದಾಗ, ಅವರು ನಿಷ್ಠಾವಂತರಾಗಿದ್ದ ಕಾರಣ, ಅವರನ್ನು ಇತರೆ ಯೆಹೂದ್ಯರು ಒಪ್ಪಿಕೊಂಡರು. ಅವರು ಶತಮಾನಗಳ ಕಾಲ ತಿರಸ್ಕರಿಸಲ್ಪಟ್ಟಿದ್ದರು, ಅವಮಾನ ಹೊಂದಿದ್ದರು, ಜನರು ಅವರಲ್ಲಿ ಭರಸವವಿಟ್ಟಿರಲಿಲ್ಲ. ಸಮಾರ್ಯದವರು ದೇವಾಲಯ ಪ್ರವೇಶ ಕಳಕೊಂಡಿದ್ದರು, ಅವರು ಯೆಹೂದ್ಯರಿಂದ ತಿರಸ್ಕರಿಸಲ್ಪಟ್ಟರು, ಮತ್ತು ಉತ್ತರ ಪಾಲಿಸ್ತೇನಿನ ಗೆರೆಜಿಮ್ ಎಂಬ ಪರ್ವತ ಪ್ರಾಂತದಲ್ಲಿ ಬೀಡುಬಿಟ್ಟರು (ಸಮಾರ್ಯ) ಯೋಹಾನ 4ರ ಸಮಾರ್ಯದ ಸ್ತ್ರೀಯ ಮತ್ತು ಯೇಸುವಿನ ನಡುವೆ ನಡೆದ ಸಂವಾದದಲ್ಲಿ ಈ ಅಂಶವನ್ನು ನೆನಪು ಮಾಡಬಹುದು. ಹಾಗೂ ಒಳ್ಳೇಯ ಸಮಾರ್ಯದವನ ಸಾಮ್ಯದಲ್ಲಿ ಯೇಸು ಸಮಾರ್ಯದವರ ಒಳ್ಳೇತನವನ್ನು ಒತ್ತಿ ಹೇಳಿರುವನು: ಯೆಹೂದ್ಯ ಯಾಜಕನು, ಹಾಗೂ ಲೇವಿಯನು ಮಾಡದ ಒಳ್ಳೆಯ ಕಾರ್ಯವನ್ನು, ಸಮಾರ್ಯದವನು ಮಾಡಿದ್ದನು, ಅವನು ತಿರಸ್ಕರಿಸಲ್ಪಟ್ಟ ಜನಾಂಗದ ಸದಸ್ಯನಾಗಿದ್ದನು. ಅದು ಅಚ್ಚರಿ ಸಂಗತಿಯಲ್ಲವೇ! ಯೆಹೂದ್ಯ ಮತ್ತು ಸಮಾರ್ಯದವರ ನಡುವೆ ಭಿನ್ನಾಭಿಪ್ರಾಯ ಇರುವಲ್ಲಿ, ಯೆಹೂದ್ಯರನ್ನು ದೇವರು ವಿಶೇಷ ಜನಾಂಗವನ್ನಾಗಿ ಆಯ್ಕೆ ಮಾಡಿದ್ದನು.

**ಧರ್ಮಶಾಸ್ತ್ರ**

ಐಗುಪ್ತದ ವಿಮೋಚನೆಯಿಂದ ದಶಾಜ್ಞೆಗಳವರೆಗೆ, ಯೆಹೂದ್ಯರ ದೈನಂದಿನ ಜೀವಿತದಲ್ಲಿ ಧರ್ಮಶಾಸ್ತ್ರವು ವಿಶೇಷ ಪಾತ್ರವನ್ನು ವಹಿಸಿತ್ತು. ಅಪೊಸ್ತಲರ ಕೃತ್ಯಗಳು 586ರಲ್ಲಿ ಬಾಬೇಲಿ ನವರು ದೇವಾಲಯವನ್ನು ನಾಶಮಾಡಿದ ನಂತರ ಧರ್ಮಶಾಸ್ತ್ರವನ್ನು ರಾಷ್ಟ್ರೀಯ ನಿಯಮವನ್ನಾಗಿ ಮಾಡಿಕೊಳ್ಳಲಾಯಿತು. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ, ಧರ್ಮಶಾಸ್ತ್ರವು ಭಾರವಿಲ್ಲದ ಹಾಗೂ ಸಾಗಿಸಬಹುದಾದ ವಸ್ತುವಾಗಿತ್ತು. ಅವರ ದೇವಾಲಯವು ನಾಶವಾಗಿದ್ದು, ಅವರುಗಳು ಸೆರೆ ಇರುವಾಗಲೂ, ಯಾಜಕರು ಧರ್ಮಶಾಸ್ತ್ರದ ಮುಖಾಂತರ ಅನ್ಯ ದೇಶದಲ್ಲೂ ಅವರನ್ನು ಮುನ್ನೆಡಸಲು ಸಾಧ್ಯವಾಯಿತು. ಎರಡನೆಯದಾಗಿ, ನಿಯಮಗಳನ್ನು ಅವರು ಪಾಲಿಸಿದ್ದರಿಂದ, ಅವರು ಇತರರ ನಡುವೆ ಪ್ರತ್ಯೇಕವಾದ ಸುರಕ್ಷಿತವಾದ ಜೀವಿತವನ್ನು ಜೀವಿಸಲು ಸಾಧ್ಯವಾಯಿತು. ಧರ್ಮಶಾಸ್ತ್ರದ ಮುಖಾಂತರ ಸುನ್ನತಿ, ಶುದ್ಧಾಶುದ್ಧ ಪದಾರ್ಥ, ಸಬ್ಬತ್ ದಿನಗಳ ಆಚರಣೆಯ ಕುರಿತು ಯೆಹೂದ್ಯರು ತಿಳುವಳಿಕೆವುಳ್ಳವರಾಗಿದ್ದರು.

ಸೆರೆಯಲ್ಲಿ ಹಾಗೂ ಸೆರೆಯ ನಂತರದ ಸಮಯದಲ್ಲಿ ಅವರು ಧರ್ಮಶಾಸ್ತ್ರವನ್ನು ಪಾಲಿಸಿದ ಕಾರಣ, ಸಭಾಮಂದಿರದ ಕಟ್ಟೋಣವಾಗಿರಬಹುದು. ಹಳೆ ಒಡಂಬಡಿಕೆಯಲ್ಲಿ ಸಭಾಮಂದಿರದ ಕುರಿತು ತಿಳಿಸದಿದ್ದರೂ, ಯೇಸುವಿನ ಸಮಯದ, ಯೆಹೂದ್ಯರ ಸಾಮಾನ್ಯ ಜೀವಿತದಲ್ಲಿ ಅದು ಅವರ ಜೀವಿತದ ಒಂದು ಭಾಗವಾಯಿತು. ಕಾಲಾಂತರದಲ್ಲಿ ಸಭಾ ಮಂದಿರವು ಪ್ರಾರ್ಥನಾ ಮಂದಿರವಾಯಿತು, ಅದು ಧರ್ಮಶಾಸ್ತ್ರದ ಪಠನದ ಹಾಗೂ ಆರಾಧನೆಯ ಸ್ಥಳವಾಗಿ ಪರಿವರ್ತನೆಗೊಂಡಿತು. ದೇವಾಲಯವಿಲ್ಲದ ಸ್ಥಳದಲ್ಲಿ, ಅವರಿಗೆ ಅದು ಪ್ರಮುಖವಾಯಿತು. ಅದರ ಆಡಳಿತವನ್ನು ರಬ್ಬಿ ಎಂಬ ಉಪದೇಶಕರು, ಅಂದರೆ ಧರ್ಮಶಾಸ್ತ್ರ ಬೋಧಕರು ತಮ್ಮ ಹತೋಟಿಗೆ ತೆಗೆದುಕೊಂಡರು.

**ದೇವಾಲಯ**

ಯೆರೂಸಲೇಮಿನ ದೇವಾಲಯವು ಯಜ್ಞಗಳ ಮೂಲ ಕೇಂದ್ರವಾಗಿ, ಹಾಗೂ ವಿವಿಧ ಹಬ್ಬಗಳನ್ನು ಆಚರಿಸುವ ಪ್ರಮುಖ ಸ್ಥಳವಾಗಿತ್ತು. ಯಾಜಕರು ದೇವಾಲಯದ ಯಜ್ಞಗಳನ್ನು ಸರ್ಪಿಸುವ ಉಸ್ತುವಾರಿಯನ್ನು ಹೊಂದಿದ್ದರು. ಆದ್ದರಿಂದ ಯೆಹೂದ್ಯರಿಗೆ ಅದು ಪ್ರಮುಖ ಕೇಂದ್ರವಾಗಿತ್ತು. ಉಸ್ತುವಾರಿ ಹೊಂದಿದ್ದ ಯಾಜಕರು ಯಜ್ಞಗಳನ್ನು ಅರ್ಪಿಸುವ ಒಂದೇ ದೇವಾಲಯವಾಗಿತ್ತು. (ಸಭಾಮಂದಿರಗಳಲ್ಲಿ ಯಜ್ಞಗಳನ್ನು ಸಮರ್ಪಿಸದೆ, ಅದನ್ನು ಧರ್ಮಶಾಸ್ತ್ರದ ಭೋದಕರ ಅಧೀನದಲ್ಲಿತ್ತು.)

ದೇವಾಲಯವು - ಪ್ರಮುಖವಾದ್ದರಿಂದ, ಯೆಹೂದ್ಯರ ಗೊಂದಲಗಳು ಅಲ್ಲಿ ಉಲ್ಬಣ ವಾಗಿತ್ತು. ರೋಮಾಯರ ಅಧಿಕಾರಾವಧಿಯಲ್ಲಿ, ಯೆಹೂದ್ಯರು ಅವರೊಂದಿಗೆ ಸಹಕಾರ ಬೆಳಸುವ ನಿಮಿತ್ತ, ರೋಮಾಯರು ಯಾಜಕರುಗಳನ್ನು ದೇವಾಲಯದ ನಾಯಕರನ್ನಾಗಿ ನೇಮಿಸಿದರು. ಆದರೆ ಅನೇಕ ಸಮಯಗಳಲ್ಲಿ ಈ ಯಾಜಕರು ಅನರ್ಹರಾಗಿದ್ದು, ಅವರು ಧರ್ಮಶಾಸ್ತ್ರಕ್ಕೆ ವಿರೋಧವಾದ ರಾಜಕೀಯವನ್ನು ಮಾಡುತ್ತಿದ್ದರು. ಈ ಕಾರಣದಿಂದ ಎಸೆನೆಸ್ ಎಂಬ ಯೆಹೂದ್ಯರ ಒಂದು ಗುಂಪು ಯಾಜಕರನ್ನು ಹಾಗೂ ದೇವಾಲಯವನ್ನು ತೊರೆದು ಹೋದರು.

**ಮುಂದಿನ ಯುಗ**

ಪರಕೀಯ ಯೆಹೂದ್ಯರನ್ನು ಶತಮಾನಗಳ ಆಡಳಿತದ ನಂತರ ಮೊದಲ ಶತಮಾನದ ಯೆಹೂದ್ಯರು, ದೇವರ ಮುಂದೆ ಅವರ ವಿರೋಧಿಗಳನ್ನು ನಾಶಮಾಡಿ, ಅವರು ಈ ಹಿಂದೆ ಅಂದರೆ ದಾವೀದನ ಹಾಗೂ ಸೊಲೋಮೋನನ ಕಾಲದಲ್ಲಿ ಹೊಂದಿದ್ದ ಸ್ವಾತಂತ್ರವನ್ನು ಪುನಃ ಹೊಂದುವರು ಎಂಬ ಭರವಸದಿಂದಿದ್ದರು. ಒಬ್ಬ ವಿಶೇಷವಾದ ನಾಯಕನಾದ ಮೆಸ್ಸೀಯನು ಬಂದು ಅವರಿಗೆ ಸುವರ್ಣಯುಗವನ್ನು (ಅಭಿಷೇಕ ಹೊಂದಿದವನು) ನೀಡುವನು ಎಂದು ನಂಬಿದ್ದರು. ಮೆಸ್ಸೀಯನು ಅಂದರೆ, ವಿವಿಧ ಗುಣಾತಿಶಯಗಳನ್ನು ಹೊಂದಿದ್ದ ದಾವೀದನಂತಿದ್ದ, ಯುದ್ಧ ವೀರನಾದ ಎರಡನೆಯ ದಾವೀದನು, ಆತನು ರೋಮಾಯರ ಆಡಳಿತವನ್ನು ಕಡೆಗಾಣಿಸಿ, ಇಸ್ರಾಯೇಲ್ ಸಂಯುಕ್ತ ಆಡಳಿತವನ್ನು ನೀಡುವನು ಎಂದು ನಂಬಿದ್ದರು. ಮೆಸ್ಸೀಯನ ಕುರಿತು ವಿವಿಧ ಭಾವನೆಗಳನ್ನು ಅವರು ಹೊಂದಿದ್ದರೂ, ಇಸ್ರಾಯೇಲ್ಯರ ಸಂಯುಕ್ತ ರಾಷ್ಟ್ರಕ್ಕಾಗಿ (ಇಸ್ರಾಯೇಲ್ಯರ ಸಂತೈಸುವಿಕೆ ಲೂಕ 2:25). ಹಾಗೂ ನೂತನ ರಾಜ್ಯಕ್ಕಾಗಿ ತವಕಿಸುತ್ತಿದ್ದರು. ಇದರಿಂದ ಅವರಿಗೆ ಸ್ವತಂತ್ರ ಹಾಗೂ ಪ್ರಭಾವವಾ ಗುವವೆಂದು ಭಾವಿಸಿದ್ದರು.

**ವೈಯಕ್ತಿಕವಾದ ಭಕ್ತಿ**

ದೇವಾಲಯದ ಯಜ್ಞಗಳು, ಮಹಾ ಹಬ್ಬದ ದಿವಸಗಳು ಹಾಗೂ ಆರಾಧನೆಯ ಸಂಗತಿಗಳು ಇದ್ದಾಗ್ಯೂ, ಯೆಹೂದ್ಯರು ದೇವರಿಗೆ ಸಮರ್ಪಿಸಿಕೊಳ್ಳುವ ವೈಯಕ್ತಿಕವಾದ ಭಕ್ತಿಯನ್ನು ಹೊಂದಿದ್ದರು. ಅವುಗಳಲ್ಲಿ ಮೂರು ಸದ್ಗುಣಗಳನ್ನು ಕಾಣುತ್ತೇವೆ: ಪ್ರಾರ್ಥನೆ ಉಪವಾಸ ದಾನ (ಬಡವರಿಗೆ ದಾನ) ಪರ್ವತದಲ್ಲಿನ ಪ್ರಸಂಗದಲ್ಲಿ ಈ ಮೂರು ಸಂಗತಿಗಳನ್ನು ತೋರಿಕೆಗಾಗಿ ಮಾಡಬಾರದು ಎಂದು ಯೇಸು ಸ್ಪಷ್ಟವಾಗಿ ತಿಳಿಸಿರುವನು (ಮತ್ತಾಯ 6:1-18).

ಯೇಸುವಿನ ಕಾಲದಲ್ಲಿ ಯೆಹೂದ್ಯರು ಈ ಮೇಲಿನ ಸಂಗತಿಗಳನ್ನೇ ಅಭ್ಯಾಸಿಸಿದ್ದರು. ಆ ವಿಚಾರಗಳನ್ನು ಗಮನಿಸಿದ ನಂತರ, ಯೆಹೂದ್ಯರ ನಡುವೆ ಇದ್ದ ಭಿನ್ನಾಭಿಪ್ರಾಯಗಳ ಕುರಿತು ವಿಚಾರಿಸೋಣ.

## III. ಯೆಹೂದ್ಯರ ವೈವಿದ್ಯತೆ ಹಾಗೂ ಭಿನ್ನಾಭಿಪ್ರಾಯಗಳು

ಮೊದಲ ಶತಮಾನದ ಯೆಹೂದ್ಯರು ಪರಸ್ಪರ ಭಿನ್ನಾಭಿಪ್ರಾಯವುಳ್ಳವರಾಗಿದ್ದರು ಎಂದು ನಾವುಗಳು ಅರಿಯುತ್ತೇವೆ. ಯೇಸುವಿನ ಕಾಲದ ಯೆಹೂದ್ಯರು ವಿಭಜನೆಗೊಂಡಿದ್ದರು. ವಿವಿಧ ಗುಂಪುಗಳು ಉದ್ಭವಿಸಿದ್ದವು, ಅವರು ನಿಯಮದ ಕುರಿತು ತಮ್ಮದೇ ಆದ ನಿಯಮಗಳನ್ನು ಹೊಂದಿದ್ದರು.

**ಗುಂಪುಗಳು**

(1) *ಫರಿಸಾಯರು.* ಸುವಾರ್ತೆಗಳಲ್ಲಿ ಫರಿಸಾಯರ ಕುರಿತು ಹೆಚ್ಚಾಗಿ ಗಮನಿಸುತ್ತೇವೆ, ಯಾಕಂದರೆ ಅವರುಗಳು ಸಬ್ಬತ್ ಹಾಗೂ ಶುದ್ಧತೆಯ ವಿಚಾರದಲ್ಲಿ, ಯೇಸುವಿಗೆ ವಿರೋಧ ವಾಗಿದ್ದರು, ಆದ್ದರಿಂದ ಅವರ ಕುರಿತು ನಾವುಗಳು ನಕರಾತ್ಮಕವಾದ ಧೋರಣೆಯನ್ನು ಹೊಂದಿದ್ದೇವೆ. ಯೋಸೇಫಸನ ಪ್ರಕಾರ ಸುಮಾರು ಆರು ಸಾವಿರ ಫರಿಸಾಯರಿದ್ದರು ಅವರು ಜನರಲ್ಲಿ ಒಳ್ಳೆಯ ವರ್ಚಸ್ಸನ್ನು ಹೊಂದಿದ್ದರು. ಅವರೆಲ್ಲರು ಮಧ್ಯಮ ವರ್ಗದ ವ್ಯಾಪಾರಸ್ಥರಾಗಿದ್ದರು.

ಅವರು ಧರ್ಮಶಾಸ್ತ್ರದ ಪಾಲಕರು ಹಾಗೂ ಸಂರಕ್ಷಕರು ಎಂದು ಭಾವಿಸಿದ್ದರು, ಅವರು ಧರ್ಮಶಾಸ್ತ್ರಕ್ಕಿಂತಲೂ ಕಠಿಣವಾದ ನಿಯಮಗಳನ್ನು ನಿರ್ಮಾಣಮಾಡಿ ಕೊಂಡಿದ್ದರು. ಅವರು ಹಾಕಿದ ತಡೆಯನ್ನು ಹಾದು ಹೋಗದವರು, ನಿಯಮವನ್ನು ಚಾಚುತಪ್ಪದೆ ಪಾಲಿಸುವರು ಎಂದು ತಿಳಿದಿದ್ದರು. ಅವರು ಧರ್ಮಶಾಸ್ತ್ರದ ಸಂಗಡ, ತಮ್ಮದೇ ಆದ ಸಂಪ್ರದಾಯಗಳನ್ನು ಯೋಜಿಸಿಕೊಂಡಿದ್ದರು, ಅದನ್ನು ಹಿರಿಯರ ಸಂಪ್ರದಾಯ ಎಂದು ಕರೆಯುತ್ತಿದ್ದರು. ಅವರು ಪುನರುತ್ಥಾನ, ಮರಣದ ನಂತರ ಜೀವ, ಹಾಗೂ ದೇವದೂತರ ಹಾಗೂ ದೆವ್ವಗಳ ಇರುವಿಕೆಯನ್ನು ನಂಬಿದ್ದರು (ಅಪೊಸ್ತಲರ ಕೃತ್ಯಗಳು 23:8).

(2) *ಸದ್ದು ಕಾಯರು.* ಮೊದಲ ಶತಮಾನದಲ್ಲಿದ್ದ ಯೆಹೂದ್ಯರ ಮತ್ತೊಂದು ಪಂಥವಾಗಿದ್ದರು ಅವರು ಸದ್ದುಕಾಯರು ಉನ್ನತ ದರ್ಜೆಯವರಾಗಿದ್ದರು. ಆ ಪಂಥದ ಯಾಜಕನು ಸಹ ದೇವಾಲಯಕ್ಕೆ ನೇಮಕಗೊಂಡಿದ್ದನು. ಆದರೆ ಫರಿಸಾಯರು ಸಾಮಾನ್ಯ ಜನರೊಂದಿಗೆ ಬಳಕೆಯಲ್ಲಿದ್ದರು, ಫರಿಸಾಯರು ದೇವಾಲಯದ ಚಟುವಟಿಕೆಗಳನ್ನು ಹತೋಟಿಯಲ್ಲಿಡುತ್ತಿದ್ದರು. ಫರಿಸಾಯರಂತೆ ಇವರು ಸಹ ಗ್ರೀಕರ ಸಂಸ್ಕೃತಿಯನ್ನು ದೂರವಿಟ್ಟಿದ್ದರು, ಸದ್ದುಕಾಯರು ಈ ಬೇಧವನ್ನು ಮಾಡಿರಲಿಲ್ಲ, ಆದ್ದರಿಂದ ಯೆಹೂದ್ಯರಲ್ಲಿ ಈ ಗುಂಪಿನ ಕುರಿತು ಸಂದೇಹ ಉಂಟಾಗಿತ್ತು.

ದೈವಶಾಸ್ತ್ರದ ಪ್ರಕಾರ, ಸದ್ದಕಾಯರು ಫರಿಸಾಯರಿಗಿಂತ ಹೆಚ್ಚಾದ ಕಟ್ಟುನಿಟ್ಟುಗಳನ್ನು ಪಾಲಿಸುತ್ತಿದ್ದರು. "ತೋರ" (ಸಲಹೆಗಳ ಪಟ್ಟಿ ಎಂಬ ಗ್ರಂಥಕ್ಕೆ): ಆದಿಕಾಂಡ, ವಿಮೋಚನ ಕಾಂಡ, ಯಾಜಕಕಾಂಡ, ಅರಣ್ಯಕಾಂಡ ಹಾಗೂ ಧರ್ಮೋಪದೇಶಕಾಂಡ, ಇವುಗಳನ್ನು ಅಧಿಕಾರಯುಕ್ತ ಗ್ರಂಥಗಳೆಂದು ಒಪ್ಪಿಕೊಂಡಿದ್ದರು. ಅವರು ಫರಿಸಾಯರ ಬಾಯಿಮಾತಿನ ನಿಯಮಗಳನ್ನು ಹಾಗೂ ಪುರುತ್ಥಾನ, ದೆವ್ವಗಳು, ದೇವದೂತರುಗಳು ಅಸ್ತಿತ್ವದಲ್ಲಿರುವರೆಂಬ ತರ್ಕವನ್ನು ವಿರೋಧಿಸಿದ್ದರು. ಸದ್ದುಕಾಯರು ಯೇಸುವಿನ ಬಳಿ ಕೇಳಿದ ಪ್ರಶ್ನೆಗಳಿಂದ ಈ ಸಂಗತಿಯನ್ನು ಅರಿಯುತ್ತೇವೆ ಲೂಕ 20:27-40.

(3) *ಎಸೆನೆಸ್.* ಯೆಹೂದ್ಯರಲ್ಲಿನ ಈ ಪಂಥವು, ದೇವಾಲಯ ಹಾಗೂ ಅದರ ಯಾಜಕರು ಭ್ರಷ್ಟರಾಗಿದ್ದರು ಎಂದು ವಾದಿಸಿದ್ದರು. ಈ ನಿಮಿತ್ತವಾಗಿ ಅವರು ಯೆಹೂದ್ಯರಿಂದ ಪ್ರತ್ಯೇಕ ಪಂಥವಾದರು - ಅಥವಾ ದೇವಾಲಯದ ಪರಿಸರದಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಈ ಗುಂಪಿನ ಹೆಸರು "ಎಸೆನೆಸ್" ಯೇಸುವಿನ ಕಾಲದ ಯೆರೂಸಲೇಮಿನಲ್ಲಿ, "ಎಸೆನೆಸರ ಪಾಳ್ಯ" ಎಂಬುದಿತ್ತು. ಸತ್ತ ಸಮುದ್ರದ ತೀರದಲ್ಲಿ ಈ ಪಾಳೆಯವಿತ್ತು ಎಂದು ಕುಮ್ರಾನ್ ಗ್ರಂಥದಲ್ಲಿ ಬರೆದದೆ. ಬರವಣಿಗೆಗಾರರಿಗೆ ಸ್ಫೂರ್ತಿ ನೀಡುವ "ಡೆಡ್ ಸೀ ಸ್ಕ್ರಾಲ್" (ಸತ್ತ

ಸಮುದ್ರದ ತೀರದ ಗ್ರಂಥ ಸುರುಳಿನ) ಮೂಲ ವ್ಯಕ್ತಿಗಳು ಇವರು ಎಂಬುದಾಗಿದೆ.

ಹೊಸ ಒಡಂಬಡಿಕೆಯಲ್ಲಿ ಎಸೆನೆಸ್‌ನ ಬಗ್ಗೆ ಮತ್ತಾಯ 5:43ರಲ್ಲಿ, ಯೇಸುವು ಈ ರೀತಿ ಹೇಳಿದ್ದಾರೆ, "ನಿನ್ನ ನೆರೆಯವನನ್ನು ಪ್ರೀತಿಸಿ, ವೈರಿಯನ್ನು ದ್ವೇಷಿಸು" ಎಂದು ಬರೆದದೆ. "ನಿನ್ನ ವೈರಿಯನ್ನು ದ್ವೇಷಿಸು" ಎಂದು ಹಳೇ ಒಡಂಬಡಿಕೆಯಲ್ಲಿ ಬರೆದಿರುವದಿಲ್ಲ, ಆದರೆ ಇದು "ಎಸೆನೆಸರ" - ತತ್ವವಾಗಿದೆ.

(4) *ಮತಾಭಿಮಾನಿಗಳು.* ರೋಮಾಯರು ಅಧಿಕಾರ ಚಲಾಯಿಸುತ್ತಿದ್ದರಿಂದ, ಅವರ ಆಡಳಿತವನ್ನು ತೆಗೆದು ಹಾಕಲು, ಯೆಹೂದ್ಯರಿಂದ ಪ್ರತ್ಯೇಕವಾದ ಪಂಥವಾಗಿತ್ತು. ಇವರು ರಾಷ್ಟ್ರೀಯವಾದಿಗಳು, ಇವರನ್ನು ಮತಾವಲಂಭಿಗಳು ಎಂದು ಕರೆದಿದ್ದರು. ರಾಜಕೀಯವಾಗಿ ಸ್ವಾತಂತ್ರ ಪಡೆಯುವದೇ ಅವರ ಪ್ರಥಮ ಆಧ್ಯತೆಯಾಗಿತ್ತು. ತಾವು ಇಸ್ರಾಯೇಲ್ ರಾಷ್ಟ್ರವನ್ನು ರೂಪಿಸಬೇಕೆಂದು ಅವರಲ್ಲಿ ಕೆಲವರು ಕ್ರಾಂತಿಕಾರಿಗಳು ಹಾಗೂ ತೀವ್ರವಾದಿಗಳು ಆಗಿದ್ದರು.

ಯೆಹೂದ್ಯರಲ್ಲಿ ಇವರು ಪ್ರತ್ಯೇಕವಾದ ಗುಂಪಾಗಿದ್ದರೂ, ಈ ಮತಾವಲಂಭಿಗಳು ಫರಿಸಾಯರೇ ಆಗಿರಬಹುದು. ಪೌಲನು ತನ್ನನ್ನು "ಮತಾಭಿಮಾನಿಯಾದ ಫರಿಸಾಯನು" ಎಂದು ವರ್ಣಿಸಿಕೊಂಡಿರುವನು (ಗಲಾತ್ಯ 1:14). ಮತಾಸಕ್ತಿಯನ್ನು ನೋಡಿದರೆ, ಕ್ರೈಸ್ತ ಸಭೆಯ ಹಿಂಸಕನು (ಫಿಲಿಪ್ಪಿ 3:6); ಆದರೆ ರಾಜಕೀಯ ಮತಾವಲಂಭಿ ಎಂದಿರುವದಿಲ್ಲ. ಪೇತ್ರನನ್ನು ಮತಾಭಿಮಾನಿಯಾದ ... ಪೇತ್ರನು ಎಂದು ಕರೆಯಲಾಗಿದೆ (ಲೂಕ 6:15), ಒಂದು ವೇಳೆ, ಒಂದು ಕಾಲದಲ್ಲಿ ಇವನು ಕ್ರಾಂತಿಕಾರಿ ಮತಾವಲಂಭಿಗಳ ಗುಂಪಿನವನಾಗಿರಬಹುದು. ಅದೇ ವಿಧದಲ್ಲಿ ಯೇಸುವಿನ ಮತ್ತೊಬ್ಬ ಶಿಷ್ಯನನ್ನು ಸುಂಕದ ಮತ್ತಾಯನು (ಲೇವಿ) ಎಂದು ಕರೆಯಲಾಗಿದೆ - ಒಂದು ವೇಳೆ ಇವನು ಮತಾವಲಂಭಿಗಳ ದ್ವೇಷಕ್ಕೆ ಒಳಗಾಗಿರಬಹುದು.

(5) *ಹೆರೋದ್ಯರು.* ಈ ಪಂಥದವರು ಸಮಾಜದಲ್ಲಿ ಐಶ್ವರ್ಯವುಳ್ಳ ಯೆಹೂದ್ಯರಾಗಿದ್ದು ಅಧಿಕಾರಿಶಾಹಿಗಳಾಗಿದ್ದರಿಂದ ರೋಮಾಯರು ಇವರನ್ನು ಕೈಗೊಂಬೆಗಳಾದ ಅರಸರನ್ನಾಗಿ ನೇಮಿಸಿಕೊಂಡಿದ್ದರು. ಮಾರ್ಕ 3:6ರಲ್ಲಿ ಅವರು ವಿರೋಧಿಗಳಾದ ಫರಿಸಾಯರಿಗೆ ಸಮೀಪ ವರ್ತಿಗಳಾಗಿದ್ದು ಯೇಸುವನ್ನು ವಿರೋಧಿಸಿದ್ದರು. ಮತ್ತಾಯ 22:15, 16ರಲ್ಲಿ ಕೈಸರನಿಗೆ ಸುಂಕ ನೀಡುವದರ ಕುರಿತಾಗಿ, ಯೇಸುವಿಗೆ ಪ್ರಶ್ನೆಗಳನ್ನು ಕೇಳಿದ್ದರು. ಯೇಸುವನು ಗೊಂದಲಕ್ಕೀಡು ಮಾಡಬೇಕೆಂದು ಹೆರೋದ್ಯರು ಮಾಡಿದ ಯೋಜನೆಯಾಗಿತ್ತು: ಒಂದು ವೇಳೆ ಆತನು "ಹೌದು" ಎಂದು ಉತ್ತರಿಸಿದ್ದರೆ, ಆತನು ಜನರಿಗೆ ವಿರೋಧಿಯಾಗುತ್ತಿದ್ದನು, ಅಥವಾ "ಇಲ್ಲ" ಎಂದಿದ್ದರೆ, ರೋಮಾ ಅಧಿಕಾರಿಗಳಿಗೆ ಈತನ ಮೇಲೆ ತಪ್ಪು ಹೊರಿಸುವದಕ್ಕೆ ಇದು ಕಾರಣವಾಗುತ್ತಿತ್ತು.

(6) *ಸ್ಥಳೀಯ ಜನರು.* ಪಾಲಿಸ್ತೇನಿನಲ್ಲಿ ವಾಸಿಸಿದ ಬಹುತೇಕ ಜನರು ಈ ಯಾವ ಪಂಥಗಳಿಗೂ ಸೇರದವರಾಗಿದ್ದರು. ಅವರು ತಮ್ಮನ್ನ "ಅಮ್ಹಅರೆಟ್ಸ್" (ಸ್ಥಳೀಯರು) ಎಂದು ಕರೆಯಲ್ಪಟ್ಟಿದ್ದರು, ದೈವ ಶಾಸ್ತ್ರದ ಪ್ರಕಾರವಾಗಿ, ಅವರು ತಮ್ಮ ಸಮಕಾಲಿನವರಲ್ಲಿ ಐಶ್ವರ್ಯವಂತರೂ ಹಾಗೂ ಒಕ್ಕಲಿಗರೂ ಆಗಿದ್ದರು. ಅವರಲ್ಲಿ, ಫರಿಸಾಯರ ಹೆಮ್ಮೆಗಾಗಲೀ ಸದ್ದುಕಾಯರ ನಿಯಮ ಪಾಲನೆಗಾಗಲೀ ಹೆರೋದ್ಯರ ರಾಜಕೀಯ ವ್ಯವಹಾರಗಳಿಗಾಗಲಿ ಸಮಯವಿರಲಿಲ್ಲ. ಯೇಸುವಿನ ಅನುಯಾಯಿಗಳಲ್ಲಿ ಅನೇಕರು ಈ ಗುಂಪಿನವರಾಗಿ ದ್ದರು, ಅವರು ಭರವಸೆಯನ್ನು ಹೊಂದಿರದೆ, ಐಶ್ವರ್ಯವನ್ನಾಗಲೀ ಅಥವಾ ರಾಜಕೀಯ ಶಕ್ತಿಯನ್ನಾಗಲೀ ಪಡೆದಿರಲಿಲ್ಲ.

**ಯೇಸು ಎಂಥವನಾಗಿದ್ದನು?**

ಯೆಹೂದ್ಯರಲ್ಲಿದ್ದ ಇಂಥಾ ಯೋಚನೆಗಳನ್ನು ಹೊಂದಿದ್ದ ಯಾವ ಗುಂಪಿಗೆ ಯೇಸು ಸೇರಿ ದವನಾಗಿದ್ದನು? ಇಂಥಹ ಗುಂಪಿನ ಸದಸ್ಯನಾಗಿದ್ದನೇ, ಅಥವಾ ಅಂಥವರಿಂದ

ಪ್ರತ್ಯೇಕವಾಗಿದ್ದನೇ?

ಯೇಸು ವೈರಿಗಳನ್ನು ಪ್ರೀತಿಸಬೇಕು ಎಂದು ಹೇಳಿದ್ದರಿಂದ, ಮತಾವಲಂಭಿಗಳಂತೆ ಇತರೆ ರಾಜಕೀಯ ವೈರಿಗಳನ್ನು ಎದುರಿಸಿ ಸ್ವಂತ ರಾಜಕೀಯ ಶಕ್ತಿಯನ್ನು ಪಡೆಯಬೇಕೆಂದಿದ್ದ ಮತಾವಲಂಭಿಗಳಂತೆ ಇರಲಿಲ್ಲ. (ಆತನಲ್ಲಿ ಐಶ್ವರ್ಯ ಇಲ್ಲದೆ ಇದ್ದರಿಂದ) ಆತನು ಹೆರೋದ್ಯರ ಗುಂಪಿಗೆ ಸೇರದವನಾಗಿದ್ದನು. ಆತನು ಯಾಜಕ ವರ್ಗದವನಾಗದೆ ಇದ್ದದರಿಂದ, ಆತನು ಸದ್ದುಕಾಯನಾಗಿರಲಿಲ್ಲ. ಯೇಸು ಮತ್ತು ಆತನ ಸಂಬಂಧಿಯಾದ ಸ್ನಾನಿಕನಾದ ಯೋಹಾನನು, ಯೆಹೂದ್ಯರ ಪ್ರಮುಖ ಪಂಥವಾದ "ಎಸೆನಸ್‌ರವರು" ಯೆಹೂದ್ಯ ಪಂಗಡಕ್ಕೆ ಸೇರದವರಾಗಿದ್ದರಿಂದ ಅವರ ಪಂಥಕ್ಕೆ ಸೇರಿದವರಾಗಿರಲಿಲ್ಲ (ಲೂಕ 3:7-14; ಮತ್ತಾಯ 23:1-39).[1]

ಸುವಾರ್ತೆಗಳಲ್ಲಿ, ಯೇಸು ಮತ್ತು ಫರಿಸಾಯರ ನಡುವೆ ತದ್ವಿರುದ್ಧವಿದ್ದರಿಂದ, ಖಂಡಿತವಾಗಿಯೂ ಯೇಸು ಫರಿಸಾಯರ ಪಂಥಕ್ಕೆ ಸೇರಿರಲಿಲ್ಲ. ಒಂದು ವೇಳೆ ಇದು ತಪ್ಪಾದ ಭಾವನೆಯು, ಆಗಿರಬಹುದು. ಏಕೆಂದರೆ ಫರಿಸಾಯರಂತೆ ಯೇಸು ಸಹ ಧರ್ಮಶಾಸ್ತ್ರವನ್ನು ಬಹುವಾಗಿ ಗೌರವಿಸುತ್ತಿದ್ದನು (ಮತ್ತಾಯ 5:17-19), ಮತ್ತು ಅವರು ಧರ್ಮಶಾಸ್ತ್ರವನ್ನು ಸರಿಯಾಗಿ ಪಾಲಿಸಲಿಲ್ಲವೆಂದು ನೇರವಾದ ಆರೋಪವನ್ನು ಮಾಡಿದ್ದನು (ಮತ್ತಾಯ 5:20; 23:16-28). ಮತ್ತಾಯ 23:1-3ರಲ್ಲಿ ಫರಿಸಾಯರ ನಾಯಕರಿಗೆ ಯೇಸು ತೋರಿದ ಗೌರವದಲ್ಲಿ ಅಚ್ಚರಿಯನ್ನು ಕಾಣುತ್ತೇವೆ: "ತರುವಾಯ ಯೇಸು ಜನರ ಗುಂಪಿಗೂ ತನ್ನ ಶಿಷ್ಯರಿಗೂ ಹೇಳಿದ್ದೇನಂದರೆ-ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಆದದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ ನಡತೆಯ ಪ್ರಕಾರ ನಡೆಯಬೇಡಿರಿ; ಅವರು ಹೇಳುತ್ತಾರೆಯೇ ಹೊರತು ನಡೆಯುವದಿಲ್ಲ." ಅದೇ ರೀತಿಯಲ್ಲಿ ಪುನರುತ್ಥಾನದ ಕುರಿತು ಮಾತನಾಡಿ ಫರಿಸಾಯರ ಪರವಾಗಿ ಸದ್ದುಕಾಯರನ್ನು ಖಂಡಿಸಿದನು (ಲೂಕ 20:27-40). ದೇವ ದೂತರು ಹಾಗೂ ದೆವ್ವಗಳ ಅಸ್ತಿತ್ವವಿದೆ ಎಂದು ಹೇಳಿ, ಅವರ ನಂಬಿಕೆಗೆ ಒತ್ತು ನೀಡಿದನು (ಲೂಕ 20:36, ಯೇಸು ಅನೇಕ ದೆವ್ವಗಳ್ನು ಬಿಡಿಸಿದ ಉದಾಹರಣೆಗಳಿವೆ). ಕೆಲವು ಸಾರಿ ಯೇಸು ಫರಿಸಾಯರೊಂದಿಗೆ ಸ್ನೇಹ ಸಂಬಂಧವನ್ನು ಹೊಂದಿದ್ದನು (ಲೂಕ 7:36; 11:37; 14:1). ಹೆರೋದನು ಯೇಸುವನ್ನು ಕೊಲ್ಲುವನು ಎಂದು ಫರಿಸಾಯರಲ್ಲಿ ಕೆಲವರು ಯೇಸುವನ್ನು ಎಚ್ಚರಿಸಿದ್ದರು (ಲೂಕ 13:31), ಒಬ್ಬ ಸದ್ದುಕಾಯನು (ಫರಿಸಾಯನು ಸಹ) "ದೇವರ ರಾಜ್ಯದಿಂದ ದೂರವಿಲ್ಲ" ಎಂದು ಯೇಸು ಉತ್ತೇಜನ ಮಾಡಿದ್ದನು (ಮಾರ್ಕ 12:28-34). ಒಬ್ಬ ಫರಿಸಾಯನು ಯೇಸುವಿನ ಪರವಾಗಿ ಮಾತನಾಡಿ ನಂತರದಲ್ಲಿ, ಯೆಹೂದ್ಯರ ಹಿರಿಸಭೆಯವರ ಸಂಗಡ ಆತನ ಸಮಾಧಿಯಲ್ಲಿ ಪಾಲುಗಾರನಾಗಿದ್ದನು (ಯೋಹಾನ 3:1; 7:45-52; 19:39, 40).

ಹೌದು ಆತನು ಫರಿಸಾಯರಿಗಿಂತ ವಿಭಿನ್ನವಾಗಿದ್ದನು ಎಂದು ಆತನಿಗೂ ಹಾಗೂ ಫರಿಸಾಯರ ನಡುವೆ ನಡೆದ ಚರ್ಚೆಯ ಮೂಲಕ ತಿಳಿಯುತ್ತವೆ ಎಂದು ಸುವಾರ್ತೆಗಳಲ್ಲಿ ಗಮನಿಸುತ್ತೇವೆ. ಸಬ್ಬತ್ ದಿವಸವನ್ನು ಆಚರಿಸುವಲ್ಲಿ ಮೋಶೆಯ ಧರ್ಮಶಾಸ್ತ್ರದಲ್ಲಿ ನಮೂದಿಸಲಾಗದ ನಿಯಮಗಳನ್ನು ಅವರು ಜನರು ಪಾಲಿಸಬೇಕು ಎಂದು ಅವರು ಒತ್ತಾಯ ಮಾಡುತ್ತಿದ್ದರಿಂದ, ಯೇಸು ಸಬ್ಬತ್‌ದಿನಕ್ಕಿಂತಲೂ ಮಾನವೀಯ ಗುಣಗಳು ಮಹತ್ವವಾದವು ಎಂದು ತಿಳಿಸಿದ್ದನು (ಮಾರ್ಕ 2:23-3:5; ಲೂಕ 13:10-17). ಫರಿಸಾಯರ ಊಟದ ವಿಷಯದಲ್ಲಿ ಯೇಸು ಅವರನ್ನು ಟೀಕೆ ಮಾಡಿ, ಮನುಷ್ಯನ ಬಾಯಲ್ಲಿ ಹೋಗುವದು ಅವನನ್ನು ಹೊಲಸು ಮಾಡದೆ, ಅವನ ಬಾಯಿಂದ ಹೊರಡುವಂಥದ್ದು ಮನುಷ್ಯನನ್ನು ಹೊಲೆ ಮಾಡುವದು ಎಂದು ಹೇಳಿದ್ದನು (ಮಾರ್ಕ 7:14-23). ಮೋಶೆಯ ನಿಯಮಗಳಿಗೆ ವಿರುದ್ಧವಾದ ಅವರ ಬಾಯಿ ಮಾತಿನ ನಿಯಮಗಳನ್ನು ಆತನು ನಿರಾಕರಿಸಿದನು.

ಫರಿಸಾಯರ ಕೆಲವು ಆಲೋಚನೆಗಳಿಗೆ ಸಮಾನಾಂತರವಾದ ಯೋಚನೆಗಳನ್ನು ಯೇಸು ಹೊಂದಿದ್ದರೂ, ಆತನು ಅವರಲ್ಲಿ ಒಬ್ಬನಾಗಿರಲಿಲ್ಲ. ಆತನ ಕುಟುಂಬದ ಬಡ ಹಿನ್ನಲೆಯೇ, ಫರಿಸಾಯರ ಹಿನ್ನಲೆಯಾಗಿರಲಿಲ್ಲ (ಲೂಕ 15:1, 2). ಯೇಸು ಸಾಮಾನ್ಯರಲ್ಲಿ ಒಬ್ಬನಾಗಿದ್ದನು, ಆತನು ಸ್ಥಳೀಯ ವ್ಯಕ್ತಿಯಾಗಿದ್ದನು: "ಆತನು ಸ್ಥಳೀಯ ಜನರ ಹಿನ್ನಲೆಯುಳ್ಳವನಾಗಿದ್ದನು - ಆದರೆ ಯೇಸು ಒಂದು ಸಹಜವಾದ ಯೆಹೂದ್ಯ ಹಿನ್ನೆಲೆಯವನು" ಎಂದು ನಿರ್ಣಯಿಸಲಾಗದು. ಆತನ ತಂದೆ ತಾಯಿಗಳು ಭಕ್ತರಾಗಿದ್ದರು, ವಿಧೇಯ ಯೆಹೂದ್ಯರಾಗಿದ್ದರು, ಅದನ್ನು ಆತನ ಜನನದ ವಿಚಾರದಲ್ಲಿ ಗಮನಿಸುತ್ತೇವೆ (ಮತ್ತಾಯ 1; 2; ಲೂಕ 1; 2).

## ಮುಕ್ತಾಯ

ಯೇಸುವಿನ ಹಿನ್ನೆಲೆಯನ್ನು ಯೆಹೂದ್ಯ ಹಿನ್ನೆಲೆಯನ್ನು ಹೊರತು ಪಡಿಸಿ ಇತರೆ ಮೂಲಗಳಿಂದ ಅರಿಯುವ ಬದಲು, ಆತನ ಹಿನ್ನೆಲೆಯನ್ನು ಅರಿತು ಯೇಸುವಿನ ಸಂಬಂಧವನ್ನು ತಿಳಿಯಬಹುದಾಗಿದೆ. ಏಕೆಂದರೆ ಯೇಸು ಯೆಹೂದ್ಯನಾದ ಮೆಸ್ಸೀಯನು.

---

ಟಿಪ್ಪಣಿ

[1]This is explained in "The Dead Sea Scrolls and the Historical Jesus," the first chapter of James H. Charlesworth, ed., *Jesus and the Dead Sea Scrolls* (New York: Anchor Bible Reference Library, Doubleday, 1992).